ಕರ್ನಾಟಕ ಸರ್ಕಾರ
ಆಯುಷ್ ಇಲಾಖೆ
ಧನ್ವಂತರಿ ರಸ್ತೆ, ಆನಂದರಾವ್ ವೃತ್ತದ ಹತ್ತಿರ, ಬೆಂಗಳೂರು-560 009
ಇ-ಮೇಲ್ : directorayush@gmail.com
ದೂರವಾಣಿ ಸಂ:080-22876553, ಫ್ಯಾಕ್ಸ್ : 080-22340139

ಸಂಖ್ಯೆ: ಆಯುಷ್/17/ವೈ.ಶಿ(2)/2017-18 ದಿನಾಂಕ:04-01-2020

**ಇವರಿಗೆ,**

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವಿಕಾಸ ಸೌಧ
ಬೆಂಗಳೂರು.

ಮಾನ್ಯರೆ,

ವಿಷಯ:- 2018-19ನೇ ಸಾಲಿನಲ್ಲಿ ಏನೇಪೋಯ ಹೋಮಿಯೋಪತಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಮಂಗಳೂರು, ಇಲ್ಲಿನ ಪದವಿ ಕೋರ್ಸ್‌ನ ಪ್ರವೇಶ ಸಂಖ್ಯೆಯನ್ನು 100ಕ್ಕೆ ನಿಗಧಿ ಪಡಿಸುವ ಬಗ್ಗೆ.

ಉಲ್ಲೇಖ:-
1. ಪ್ರಾಚಾರ್ಯರು, ಏನೇಪೋಯ ಹೋಮಿಯೋಪತಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಮಂಗಳೂರು, ಇವರ ಪತ್ರ ದಿನಾಂಕ: 29-11-2019.
2. ಭಾರತ ಸರ್ಕಾರದ ಆಯುಷ್ ಮಂತ್ರಾಲಯ, ನವದೆಹಲಿ, ಇವರ ಪತ್ರ ಸಂಖ್ಯೆ: F.No.R-12014/28/2017/EP(H) ದಿನಾಂಕ: 23-10-2018.
3. ಕುಲಸಚಿವರು, ಏನೇಪೋಯ ಡೀಮ್ಡ್ ವಿಶ್ವವಿದ್ಯಾಲಯ, ಮಂಗಳೂರು, ಇವರ ಪತ್ರ ಸಂಖ್ಯೆ: Y/REG/ACA/Con.Affiliation/2019. ದಿನಾಂಕ: 14-09-2019.
4. ಸರ್ಕಾರದ ಪತ್ರ ಸಂಖ್ಯೆ: ಆಕುಕ 109 ಪಿಟಿಡಿ 2017 ದಿನಾಂಕ: 28-04-2017.
5. ನಿರ್ದೇಶನಾಲಯದ ನಿರಾಕ್ಷೇಪಣಾ ಪ್ರಮಾಣ ಪತ್ರ ಸಂಖ್ಯೆ: ಆಯುಷ್/17/ವೈ.ಶಿ(2)/2017-18. ದಿನಾಂಕ:26-04-2017.

*******

ಕುಲಸಚಿವರು, ಏನೇಪೋಯ ಡೀಮ್ಡ್ ವಿಶ್ವವಿದ್ಯಾಲಯ, ಮಂಗಳೂರು, ಇವರು ಉಲ್ಲೇಖ(3)ರ ಪತ್ರದಲ್ಲಿ 2018-19ನೇ ಶೈಕ್ಷಣಿಕ ಸಾಲಿನಿಂದ ಪದವಿ ಕೋರ್ಸ್‌ನ ಪ್ರವೇಶ ಸಂಖ್ಯೆಯನ್ನು 100ಕ್ಕೆ ನಿಗಧಿ ಪಡಿಸಿ, ಕೆಲವೊಂದು ಷರತ್ತಿಗೊಳಪಟ್ಟು ಪ್ರಪತ್ರ-5ರಲ್ಲಿ Consent of Affiliationನ್ನು ಏನೇಪೋಯ ಹೋಮಿಯೋಪತಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಏನೇಪೋಯ ಡೀಮ್ಡ್ ವಿಶ್ವವಿದ್ಯಾಲಯ, ನಂ. 29,30,31. ನರಿಂಗ ವಿಲೇಜ್, ದೇರಳಕಟ್ಟೆ (ಮಂಗಳೂರು)- ಅಂಚೆ, ಬಂಟ್ವಾಳ ತಾಲೂಕು, ದಕ್ಷಣ ಕನ್ನಡ ಜಿಲ್ಲೆ - 575 018, ಇವರಿಗೆ ನೀಡಿರುತ್ತಾರೆ. ಅದರ ಮೇರೆಗೆ ಉಲ್ಲೇಖ (5)ರ ನಿರ್ದೇಶನಾಲಯದ ಪತ್ರ ದಿನಾಂಕ:26-04-2017ರಲ್ಲಿ ನಿರ್ದೇಶನಾಲಯದ ವತಿಯಿಂದ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ಪ್ರಪತ್ರ-4ರಲ್ಲಿ ರಾಜ್ಯ ಸರ್ಕಾರದ ಮುಖಾಂತರ ಭಾರತ ಸರ್ಕಾರದ ಆಯುಷ್ ಮಂತ್ರಾಲಯ, ನವದೆಹಲಿ ಇವರಿಗೆ ಸಲ್ಲಿಸಲಾಗಿರುತ್ತದೆ.

ಕೇಂದ್ರ ಸರ್ಕಾರವು ಉಲ್ಲೇಖ(2)ರ ಪತ್ರ ಸಂಖ್ಯೆ: F.No.R-12014/28/2017- EP(H) ದಿನಾಂಕ: 23-10-2018ರಲ್ಲಿ ಪದವಿ ಕೋರ್ಸ್‌ನ ಪ್ರವೇಶ ಸಂಖ್ಯೆಯನ್ನು 100ಕ್ಕೆ ನಿಗಧಿ ಪಡಿಸಿ 2018-19ನೇ ಶೈಕ್ಷಣಿಕ ಸಾಲಿನಿಂದ ಅನ್ವಯವಾಗುವಂತೆ ಕೆಲವು ಷರತ್ತಿಗೊಳಪಟ್ಟು ಭಾರತ ಸರ್ಕಾರದ ಆಯುಷ್ ಮಂತ್ರಾಲಯ, ನವದೆಹಲಿ ಇವರು ಅನುಮತಿ ನೀಡಿರುತ್ತಾರೆ.

2018-19ನೇ ಶೈಕ್ಷಣಿಕ ಸಾಲಿಗೆ ಸದರಿ ಮಹಾವಿದ್ಯಾಲಯದ ಪ್ರಥಮ ಬಿ.ಹೆಚ್.ಎಂ.ಎಸ್. ಪದವಿ ಕೋರ್ಸ್‌ನ ಪ್ರವೇಶ ಸಂಖ್ಯೆಯನ್ನು 100ಕ್ಕೆ ನಿಗಧಿಪಡಿಸಿ ವಿದ್ಯಾರ್ಥಿಗಳ ಪ್ರವೇಶಕ್ಕೆ ಅನುಮತಿ ನೀಡಿರುವುದರಿಂದ 2018-19ನೇ ಶೈಕ್ಷಣಿಕ ಸಾಲಿನಿಂದ ವಿದ್ಯಾರ್ಥಿಗಳನ್ನು ಪ್ರವೇಶಾತಿ ಮಾಡಿಕೊಳ್ಳುವ ಬಗ್ಗೆ ಉಲ್ಲೇಖ(1)ರ ಪತ್ರ ದಿನಾಂಕ:29-11-2019ರಲ್ಲಿ ಪ್ರಾಚಾರ್ಯರು, ಏನೇಪೋಯ ಹೋಮಿಯೋಪತಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಏನೇಪೋಯ ಡೀಮ್ಡ್ ವಿಶ್ವವಿದ್ಯಾಲಯ, ನಂ. 29,30,31. ನರಿಂಗ ವಿಲೇಜ್, ದೇರಳಕಟ್ಟೆ (ಮಂಗಳೂರು)- ಅಂಚೆ, ಬಂಟ್ವಾಳ ತಾಲೂಕು, ದಕ್ಷಣ ಕನ್ನಡ ಜಿಲ್ಲೆ - 575 018, ಇವರು ಕೋರಿರುತ್ತಾರೆ (ಪ್ರತಿ ಲಗತ್ತಿಸಿದೆ).

ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಶೀಲಿಸಿ ಭಾರತ ಸರ್ಕಾರದ ಆಯುಷ್ ಮಂತ್ರಾಲಯವು ಸದರಿ ಮಹಾವಿದ್ಯಾಲಯಕ್ಕೆ 2018-19ನೇ ಶೈಕ್ಷಣಿಕ ಸಾಲಿನಿಂದ 100 ವಿದ್ಯಾರ್ಥಿಗಳ ಪ್ರವೇಶಕ್ಕೆ ಅನುಮತಿ ನೀಡಿರುವುದರಿಂದ ಬಿ.ಹೆಚ್.ಎಂ.ಎಸ್. ಪದವಿ ಕೋರ್ಸ್‌ನ ಪ್ರವೇಶ ಸಂಖ್ಯೆಯನ್ನು 100ಕ್ಕೆ ನಿಗಧಿ ಪಡಿಸಿ ಘಟನೋತ್ತರ ಅನುಮತಿ ನೀಡಿ, 2018-19ನೇ ಶೈಕ್ಷಣಿಕ ಸಾಲಿನಿಂದ ಅನ್ವಯಿಸುವಂತೆ ಸರ್ಕಾರಿ ಆದೇಶ ಹೊರಡಿಸಲು ಕೋರಲಾಗಿದೆ.

ತಮ್ಮ ವಿಶ್ವಾಸಿ,

ಆಯುಕ್ತರು
ಆಯುಷ್ ನಿರ್ದೇಶನಾಲಯ,
ಬೆಂಗಳೂರು

20/02/2020

**ಪ್ರತಿಯನ್ನು:-**

ಏನೇಪೋಯ ಹೋಮಿಯೋಪತಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಏನೇಪೋಯ ಡೀಮ್ಡ್ ವಿಶ್ವವಿದ್ಯಾಲಯ, ನಂ. 29,30,31. ನರಿಂಗ ವಿಲೇಜ್, ದೇರಳಕಟ್ಟೆ (ಮಂಗಳೂರು)- ಅಂಚೆ, ಬಂಟ್ವಾಳ ತಾಲೂಕು, ದಕ್ಷಣ ಕನ್ನಡ ಜಿಲ್ಲೆ-575 018.

Yenepoya Homoeopathic
Medical College & Hospital
Inward No: 198
Received on: 20/2/2020
To: